ದೇವರ ಪ್ರಸಾದವನ್ನೇ ಕಲಬೆರಕೆಯ ಕಣ್ಣುಗಳಿಂದ ನೋಡುತ್ತಿರುವಾಗ, ಜನಸಾಮಾನ್ಯರು ತಿನ್ನುವ ಆಹಾರದಲ್ಲಿ ಶುದ್ಧತೆಯನ್ನು ಎಲ್ಲಿಂದ ಹುಡುಕುವುದು? ಆಹಾರಧಾನ್ಯ, ಹಣ್ಣು–ತರಕಾರಿಗಳಿಗೆ ಬೆಳೆಯ ಸಂದರ್ಭದಲ್ಲೇ ಔಷಧಿ ರೂಪದಲ್ಲಿ ವಿಷ ಸೇರುತ್ತಿದೆ. ಧಾನ್ಯ–ತರಕಾರಿಗಳನ್ನು ಅಡುಗೆಯಾಗಿ ಸಿದ್ಧಪಡಿಸುವ ಸಂದರ್ಭದಲ್ಲೂ ರುಚಿಕಾರಕಗಳ ಹೆಸರಿನಲ್ಲಿ ನಂಜು ಸೇರುತ್ತದೆ. ಪೇಟೆಯಲ್ಲಿ ದೊರೆಯುವ ಆಹಾರ ಪದಾರ್ಥಗಳ ಬಗ್ಗೆ ಹೇಳುವುದೇನಿದೆ? ಹಲವು ಹಂತಗಳಲ್ಲಿ, ಹಲವು ರೂಪದಲ್ಲಿ ನಂಜು ನಮ್ಮ ಹೊಟ್ಟೆ ಸೇರುತ್ತಿದೆ. ಈ ನಂಜಿನಿಂದ ನಾವು ತಪ್ಪಿಸಿಕೊಳ್ಳುವುದು ಹೇಗೆ? ಪಾರಾಗುವುದು ಸಾಧ್ಯವಿದೆಯೆ? ಇದು, ಆಹಾರ ಅವಲೋಕನದ ಸಮಯವಷ್ಟೇ ಅಲ್ಲ, ಆತ್ಮಾವಲೋಕನದ ಸಂದರ್ಭವೂ ಹೌದು.

■ ಕೋಡಿಬೆಟ್ಟು ರಾಜಲಕ್ಷ್ಮಿ



ಕೃಷಿಯ ಪ್ರತಿ ಹಂತದಲ್ಲೂ ಕೀಟನಾಶಕ ಸಿಂಪರಣೆ ಅನಿವಾರ್ಯ ಎನ್ನುವ ಸ್ಥಿತಿ ಇಂದಿನದು.